

بِسۡمِ اللّٰہِ الرَّحۡمٰنِ الرَّحِیۡمِ

# ವಲಸೆ ಬಂದ ಅಹ್ಮದಿ ಮುಸ್ಲಿಮರ ಜವಾಬ್ದಾರಿಕೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಸ್ಪೈನಿನ **‘ಬೈತುರ್ರಹ್ಮಾನ್’** ಮಸೀದಿಯಲ್ಲಿ **06–04–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಸ್ಪೈನ್ ದೇಶ ಪಶ್ಚಿಮ ದೇಶಗಳಲ್ಲಿ ಒಂದಾಗಿದ್ದರೂ ಆರ್ಥಿಕ ಭದ್ರತೆ ಕಡಿಮೆಯುಳ್ಳ ಯುರೋಪಿನ ಒಂದು ದೇಶವೆಂದು ಗಣಿಸಲ್ಪಡುತ್ತದೆ. ಉದ್ಯೋಗ ಲಭ್ಯತೆ, ಆದಾಯ ಮತ್ತು ಜೀವನಮಟ್ಟ ಇವುಗಳ ಕುರಿತಂತೆ ಯುರೋಪಿನ ಇತರ ದೇಶಗಳಾದ ಫ್ರಾನ್ಸ್ ಜರ್ಮನಿ, ಹಾಲೆಂಡ್, ಯು.ಕೆ. ಮೊದಲಾದುವುಗಳಿಗಿಂತ ಕಡಿಮೆಯಾಗಿದೆ. ಆದರೆ ಪಾಕಿಸ್ಥಾನದೊಂದಿಗೆ ಹೋಲಿಸಿ ನೋಡುವುದಾದರೆ ಅದರ ಜೀವಿತಮಟ್ಟ ಉತ್ತಮವೇ ಆಗಿದೆ. ಇದೇ ಕಾರಣದಿಂದ ಅನೇಕ ಪಾಕಿಸ್ಥಾನಿಯರು ವಾಣಿಜ್ಯ ಉದ್ದೇಶದಿಂದಲೂ ನೌಕರಿಯ ಉದ್ದೇಶದಿಂದಲೂ ಇಲ್ಲಿಗೆ ಆಗಮಿಸುತ್ತಾರೆ. ಅಹ್ಮದಿಯರಿಗೆ ಸಂಬಂಧಿಸಿ ಹೇಳುವುದಾದರೆ ಅವರು ಪಾಕಿಸ್ಥಾನದಿಂದ ಎರಡು ಕಾರಣಗಳಿಗಾಗಿ ಹೊರಗೆ ಹೊಗುತ್ತಾರೆ. ಅವುಗಳಲ್ಲಿ ಮುಖ್ಯವಾದುದು ಧಾರ್ಮಿಕ ಸ್ವಾತಂತ್ರ್ಯವಿಲ್ಲದಿರುವುದಾಗಿದೆ. ಎರಡನೆಯದು ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಹೊಂದುವುದಾಗಿದೆ. ಈ ದೇಶದಲ್ಲಿ ಆಶ್ರಯ ಬೇಡಿಕೊಳ್ಳುವವರು ಅಥವಾ ಸ್ಥಿರವಾಸಕ್ಕೆ ಅಪೇಕ್ಷಿಸುವವರು ಅದಕ್ಕೋಸ್ಕರ ವೀಸ ಪಡೆಯಲು ಹೇಳುವ ಕಾರಣ ಪಾಕಿಸ್ಥಾನದಲ್ಲಿ ನಮ್ಮ ವಿಶ್ವಾಸದ ಪ್ರಕಾರ ಸ್ವತಂತ್ರವಾಗಿ ಜೀವಿಸಿ ತಾವು ಮುಸ್ಲಿಮರೆಂದು ಹೇಳುವ ಪರಿಸ್ಥಿತಿ ಇಲ್ಲ ಎಂಬುದಾಗಿದೆ. ಅಲ್ಲಿ ಆರಾಧನೆ ಮಾಡಲು ಮತ್ತು ಧಾರ್ಮಿಕ ಆಚರಣೆಗಳನ್ನು ಮಾಡಲು ಸ್ವಾತಂತ್ರ್ಯ ಇಲ್ಲ ಎಂದಾಗಿದೆ. ಕೆಲವು ಜನರು ತಮ್ಮ ಸ್ಥಿತಿಯನ್ನು ಸತ್ಯವಾದ ರೀತಿಯಲ್ಲಿ ವಿವರಿಸುತ್ತಾರೆ. ಕೆಲವರು ಕಥೆಕಟ್ಟಿ ಸಹ ಹೇಳುತ್ತಾರೆ. ಆದರೆ ಹಾಗೆ ಮಾಡುವ ಆವಶ್ಯಕತೆಯೇನೂ ಇಲ್ಲ. ನಾನು ಅನೇಕ ಸಾರಿ ಹೇಳಿದ್ದೇನೆ. ಸತ್ಯವಾದ ವಾಸ್ತವಿಕ ಸಂಗತಿಗಳನ್ನು ಹೇಳಬೇಕು. ಧರ್ಮದ ಹೆಸರಲ್ಲಿ ನಮ್ಮ ವಿರುದ್ಧ ಪಾಕಿಸ್ಥಾನದಲ್ಲಿ ನಡೆಸಲಾಗುವ ದೌರ್ಜನ್ಯಗಳನ್ನು ವಿವರಿಸಿ ಹೇಳಿದರೆ ಸಾಕು. ಇಂತಹ ಪರಿಸ್ಥಿತಿಯಲ್ಲಿ ಅಲ್ಲಿ ವಾಸಿಸುವುದು ನಮ್ಮನ್ನು ಮಾನಸಿಕವಾಗಿ ಕಠಿಣವಾದ ಒತ್ತಡಕ್ಕೆ ಗುರಿಪಡಿಸುತ್ತದೆ, ಅಲ್ಲಿ ಸ್ಥಿರವಾಗಿ ಚಿತ್ರಹಿಂಸೆ ನೀಡಲಾಗುತ್ತಿದೆ, ಎಂದು ಹೇಳಿದರೆ ಇಲ್ಲಿನ ಜನರು ಮನವರಿಕೆ ಮಾಡಿಕೊಳ್ಳುತ್ತಾರೆ. ಅನ್ಯರ ಮಾತುಗಳನ್ನು ಆಲಿಸಿ ಅಥವಾ ವಕೀಲರ ಮಾತುಗಳನ್ನು ಅನುಸರಿಸಿ ನಿಮ್ಮ ಸ್ಥಿತಿಯನ್ನು ಅತಿಶಯೋಕ್ತಿಗಳಿಂದ ವರ್ಣಿಸುವ ಆವಶ್ಯಕತೆ ಇಲ್ಲ. ಅದೇ ರೀತಿ ನಿಮ್ಮ ಹೇಳಿಕೆ ಆರಂಭದಿಂದ ಅಂತ್ಯದ ತನಕ ಒಂದೇ ರೀತಿ ಇರಬೇಕು. ನೀವು ನಿಮ್ಮ ಹೇಳಿಕೆಗಳನ್ನು ಬದಲಾಯಿಸುತ್ತಾ ಇದ್ದರೆ ಸರಕಾರಿ ಅಧಿಕಾರಿಗಳಿಗೆ ನೀವು ಸುಳ್ಳು ಹೇಳುತ್ತಿರುವಿರೆಂಬ ಸಂಶಯ ಉದ್ಭವಿಸಬಹುದು. ಸುಳ್ಳಿನಿಂದ ತನ್ನನ್ನು ರಕ್ಷಿಸಿಕೊಳ್ಳುವುದು ಪ್ರತಿಯೊಬ್ಬ ಅಹ್ಮದಿಗೆ ಆವಶ್ಯಕವಾಗಿದೆ. ಸುಳ್ಳು ಹೇಳುವುದು ಶಿರ್ಕ್‌ಗೆ ಸಮವೆಂದು ಅಲ್ಲಾಹನು ಹೇಳಿದ್ದಾನೆ. ಆದುದರಿಂದ ಒಬ್ಬ ಅಹ್ಮದಿ ಶಿರ್ಕ್ ಮಾಡುವನು ಎಂದು ಎಂದೂ ಪ್ರತೀಕ್ಷಿಸಲಾಗದು. ಅಹ್ಮದಿ ಒಂದು ಕಡೆ ಹೀಗೆ ವಾದಿಸುತ್ತಾನೆ: ನಾನು ಇತರ ಎಲ್ಲರಿಗಿಂತ ತೌಹೀದನ್ನು ನಂಬುವವನಾಗಿರುವೆನು. ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮನಾಗಿರುವೆನು. ಈ ಕಾಲಘಟ್ಟದ ಇಮಾಮ್ ಮಸೀಹ್ ಮೌಊದ್ ಮತ್ತು ಮಹದೀ ಮಅ್‌ಹೂದರನ್ನು ನಂಬುವವನಾಗಿರುವೆನು ಎಂದು ಹೇಳುತ್ತಾ ಇನ್ನೊಂದು ಕಡೆ ಒಬ್ಬ ಏಕದೇವ ವಿಶ್ವಾಸಿ ತನ್ನನ್ನು ರಕ್ಷಿಸಿಕೊಳ್ಳಬೇಕಾದ ಮಹಾಪಾಪ ಕೃತ್ಯದಿಂದ ತನ್ನನ್ನು ರಕ್ಷಿಸಿಕೊಳ್ಳದಿರುವುದು ಸಾಧ್ಯವಿಲ್ಲ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ತನ್ನನ್ನು ಪರಿಶೋಧಿಸಬೇಕು– ಲೌಕಿಕ ಲಾಭಕ್ಕೋಸ್ಕರ ಅಲ್ಲಾಹನ ದೃಷ್ಟಿಯಲ್ಲಿ ಮಹಾಪಾಪಿಯಾಗುವ ಪಾಪಕೃತ್ಯ ನಾವು ಮಾಡುತ್ತಿರುವೆವೋ ಎಂದು. ನಾವು ನಮ್ಮ ವಿಶ್ವಾಸವನ್ನು ರಕ್ಷಿಸಲು ಮತ್ತು ನಮ್ಮ ಧರ್ಮದಲ್ಲಿ ನೆಲೆನಿಲ್ಲಲು ನಮ್ಮ ದೇಶದಿಂದ ಹೊರಗೆ ಹೋಗುವಾಗ ಪ್ರಥಮವಾಗಿ ನಾವು ಅಲ್ಲಾಹನ ಆಜ್ಞೆಗಳಿಗೆ ಆದ್ಯತೆ ನೀಡಬೇಕಾಗಿದೆ. ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಮ್ ಅಂಗೀಕರಿಸಿದ ನಂತರ ನಮ್ಮ ಆದ್ಯತೆಗಳೇನೆಂದೂ ಅವು ಯಾವುದೆಂದೂ ಯೋಚಿಸಬೇಕಾಗಿದೆ. ನಮ್ಮ ಆದ್ಯತೆಗಳು ಅಲ್ಲಾಹನ ಆಜ್ಞೆಗಳ ಪ್ರಕಾರವಾಗಿಲ್ಲವಾದರೆ ನಾವು ನಮ್ಮ ಹಿಜ್‌ರತ್‌ನ ಉದ್ದೇಶಲಕ್ಷ್ಯವನ್ನು ಗಳಿಸಿಲ್ಲ ಎಂದಾಗುತ್ತದೆ. ನಮ್ಮ ಆದ್ಯತೆಗಳು ಅಲ್ಲಾಹನ ಆಜ್ಞೆಗಳಿಗೆ ಅನುಸಾರವಾಗಿದ್ದರೆ ಮಾತ್ರ ನಾವು ನಮ್ಮ ಹಿಜ್‌ರತ್ತಿನ ಉದ್ದೇಶಲಕ್ಷ್ಯ ಗಳಿಸಿದೆವು ಎಂದಾಗುತ್ತದೆ. ಅಂತಹ ಸ್ಥಿತಿಯಲ್ಲಿ ಅಲ್ಲಾಹನ ಅನುಗ್ರಹ ನಮ್ಮೊಂದಿಗಿರುತ್ತದೆ. ನಮ್ಮ ಅಸ್ತಿಭಾರವೇ ಸುಳ್ಳಿನ ಮೇಲಿದ್ದರೆ, ನಾವು ಲೌಕಿಕ ಲಾಭ ಗಳಿಸುವುದನ್ನು ನಮ್ಮ ಉದ್ದೇಶಲಕ್ಷ್ಯವನ್ನಾಗಿ ಮಾಡಿದ್ದರೆ ನಾವು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗಲಾರೆವು. ಅಲ್ಲಾಹನ ಏಕತ್ವದಲ್ಲಿ ವಿಶ್ವಾಸ ಹೊಂದಿದವರು, ಅಲ್ಲಾಹನನ್ನು ಆರಾಧಿಸುವವರು ಎಂದೂ ಶಿರ್ಕ್ ಮಾಡಲಾರರು. ತಮ್ಮ ಸೃಷ್ಟಿಯ ಉದ್ದೇಶವನ್ನು ಮನವರಿಕೆ ಮಾಡಿಕೊಂಡವರ ಪ್ರಥಮ ಲಕ್ಷ್ಯ ಅಲ್ಲಾಹನ ಸಂಪ್ರೀತಿಗಳಿಸುವುದಾಗಿರುತ್ತದೆ. ಲೌಕಿಕವಾದ ಲಾಭಗಳಿಸುವುದು ಅಥವಾ ಲೋಕದ ವರ್ಣಗಳಲ್ಲಿ ಮುಳುಗಿ ಜೀವಿಸುವುದು ನಮ್ಮ ಜೀವಿತದ ಉದ್ದೇಶಲಕ್ಷ್ಯವಲ್ಲ ಎಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಅಲ್ಲಾಹನ ಸಂಪ್ರೀತಿ ಗಳಿಸಲು ಅವನು ಹೇಳಿರುವ ನಮ್ಮ ಜೀವಿತದ ಉದ್ದೇಶಲಕ್ಷ್ಯವನ್ನು ಗಳಿಸಲು ಪ್ರಯತ್ನಿಸುವುದಾದರೆ ಮಾತ್ರ ನಾವು ವಾಸ್ತವಿಕ ಜಯವನ್ನು ಗಳಿಸಬಲ್ಲೆವು. ನಾವು ಈ

ಲೋಕಕ್ಕೆ ಆಗಮಿಸಿದ ಉದ್ದೇಶಲಕ್ಷ್ಯವನ್ನು ಈಡೇರಿಸುವೆವು. ಆಗ ಈ ಲೋಕ ಮತ್ತು ಅದರ ಐಶ್ವರ್ಯಗಳು ನಮಗೆ ಖಂಡಿತ ದೊರಕುವುವು. ಅಲ್ಲಾಹನು ತನ್ನ ಕಡೆಗೆ ಆಗಮಿಸುವವರನ್ನು ದೀನ್ ಮತ್ತು ದುನಿಯಾದ ಒಳಿತುಗಳಿಂದ ವಂಚಿತರನ್ನಾಗಿ ಮಾಡುವುದಿಲ್ಲ. ಬದಲಾಗಿ ಅಲ್ಲಾಹನು ನಮಗೆ ಈ ಪ್ರಾರ್ಥನೆ ಕಲಿಸಿರುವನು: **ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅದ್ಹಾಬನ್ನಾರ್** – ನಮ್ಮ ಪ್ರಭೂ, ನಮಗೆ ಇಹಲೋಕ ಜೀವನದಲ್ಲಿ ಒಳಿತನ್ನು ಅನುಗ್ರಹಿಸು. ಹಾಗೆಯೇ ಪರಲೋಕ ಜೀವನದಲ್ಲಿ ಸಹ ಒಳಿತನ್ನು ದಯಪಾಲಿಸು. ಮತ್ತು ನರಕ ಯಾತನೆಯಿಂದ ನಮ್ಮನ್ನು ರಕ್ಷಿಸು. (2:202).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದರ ಬಗ್ಗೆ ಹೀಗೆ ಹೇಳುತ್ತಾರೆ: ಮನುಷ್ಯನಿಗೆ ತನ್ನ ಆತ್ಮ ಸಂತೃಪ್ತಿಗೋಸ್ಕರ ಎರಡು ವಸ್ತುಗಳ ಆವಶ್ಯಕತೆ ಇದೆ. ಒಂದನೆಯದು, ಲೋಕದ ಸಂಕ್ಷಿಪ್ತ ಜೀವಿತ ಕಾಲದಲ್ಲಿ ವಿಪತ್ತುಗಳು, ಕಷ್ಟಗಳು ಮತ್ತು ಪರೀಕ್ಷೆಗಳು ಮೊದಲಾದುವುಗಳಿಂದ ಸುರಕ್ಷಿತನಾಗಿರಬೇಕು. ಎರಡನೆಯದಾಗಿ, ಅಲ್ಲಾಹನಿಂದ ಮನುಷ್ಯನನ್ನು ದೂರ ಸರಿಸುವಂತಹ ದುಷ್ಕೃತ್ಯಗಳಿಂದಲೂ ಆಧ್ಯಾತ್ಮಿಕ ರೋಗಗಳಿಂದಲೂ ಸುರಕ್ಷಿತನಾಗಿರಬೇಕು. ಲೌಕಿಕ ಒಳಿತು ಎಂದರೆ ಶಾರೀರಿಕವಾಗಿ ಮತ್ತು ಆದ್ಯಾತ್ಮಿಕವಾಗಿ ಪ್ರತಿಯೊಂದು ವಿಪತ್ತು, ಕೊಳಕು ಜೀವಿನ ಮತ್ತು ಅಪಮಾನದಿಂದ ರಕ್ಷಿಸಲ್ಪಡುವುದು. **ರಬ್ಬನಾ** ನಮ್ಮ ಪ್ರಭೂ ಎಂಬ ಪದದಲ್ಲಿಯೇ ತೌಬ ಮಾಡುವ ಬಗ್ಗೆ ಒಂದು ಸೂಕ್ಷ್ಮ ಸೂಚನೆ ಇದೆ. ಮನುಷ್ಯನು **ರಬ್ಬನಾ** ನಮ್ಮ ಪ್ರಭೂ ಎಂದು ಹೇಳುವಾಗ ಅಲ್ಲಾಹನ ಕಡೆಗೆ ಬಾಗುತ್ತಾನೆ. ಏಕೆಂದರೆ ಅವನು ಮೊದಲು ತನ್ನ ಪ್ರಭುವನ್ನಾಗಿ ಮಾಡಿದ್ದ ಇತರ ಎಲ್ಲವುಗಳಿಂದ ಬೇಸರಗೊಂಡು ತನ್ನ ವಾಸ್ತವಿಕ ಪ್ರಭುವಿನ ಕಡೆಗೆ ಮರಳಿದ್ದಾನೆ. ವಾಸ್ತವಿಕ ನೋವು ಮತ್ತು ಹೃದಯಾರ್ದ್ರತೆ ಇಲ್ಲದಿದ್ದರೆ ಈ ಶಬ್ದ ಮನುಷ್ಯನ ಹೃದಯದಿಂದ ಹೊರಡಲಾರದು.

ವಾಸ್ತವದಲ್ಲಿ ಮನುಷ್ಯನು ಅನೇಕರನ್ನು ತನ್ನ ಪ್ರಭುಗಳನ್ನಾಗಿ ಮಾಡಿಕೊಂಡಿರುತ್ತಾನೆ. ಅವನಿಗೆ ತನ್ನ ಉಪಾಯಗಳ ಮತ್ತು ವಂಚನೆಗಳ ಬಗ್ಗೆ ಭರವಸೆ ಇರುತ್ತವೆ. ಅವುಗಳೇ ಅವನ ಪ್ರಭುಗಳಾಗಿರುತ್ತವೆ. ಮನುಷ್ಯನಿಗೆ ತನ್ನ ಜ್ಞಾನ ಅಥವಾ ತೋಳ್ಬಲದ ಬಗ್ಗೆ ಹೆಮ್ಮೆ ಇರುವುದಾದರೆ ಅವುಗಳೇ ಅವನ ರಬ್ಬ್ (ಪ್ರಭು) ಆಗಿರುತ್ತವೆ. ಒಬ್ಬ ವ್ಯಕ್ತಿಗೆ ತನ್ನ ಸೌಂದರ್ಯ ಅಥವಾ ಸಂಪತ್ತು ಬಗ್ಗೆ ಹೆಮ್ಮೆ ಇದ್ದರೆ ಅವುಗಳೇ ಆ ವ್ಯಕ್ತಿಯ ರಬ್ಬ್ ಆಗಿರುತ್ತವೆ. ಇದೇ ರೀತಿ ಸಾವಿರಾರು ವಸ್ತುಗಳು ಅವನೊಂದಿಗೆ ಸೇರುತ್ತವೆ. ಇವುಗಳನ್ನೆಲ್ಲಾ ತ್ಯಜಿಸಿ ಅವುಗಳ ಬಗ್ಗೆ ಅತೃಪ್ತಿ ಸೂಚಿಸಿ ಏಕನೂ ಸಹಭಾಗಿ ಇಲ್ಲದವನೂ ಆಗಿರುವ ವಾಸ್ತವಿಕ ರಬ್ಬ್ ಕಡೆಗೆ ತಲೆಬಾಗಿ **ರಬ್ಬನಾ** ಎಂಬ ನೋವು ಭರಿತ ಹೃದಯ ಕರಗಿಸುವ ಶಬ್ದಗಳಿಂದ ಅಲ್ಲಾಹನ ಆಸ್ಥಾನದಲ್ಲಿ ಬಿದ್ದು ಬಿಡುವ ತನಕ ಅವನು ವಾಸ್ತವಿಕ ಪ್ರಭುವನ್ನು ಮನವರಿಕೆ ಮಾಡಿಕೊಂಡಿರುವುದಿಲ್ಲ. **ರಬ್ಬನಾ** ಎಂಬ ಪದ ವಾಸ್ತವಿಕವಾಗಿ ಉಚ್ಚರಿಸಲ್ಪಡುವುದು ನೋವುಭರಿತ, ಹೃದಯ ಕರಗುವ ಶಬ್ದ ಹೊರಡುವಾಗ ಮಾತ್ರವಾಗಿರುತ್ತದೆ. ಅವನು ಆಗ ಈ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಳ್ಳುತ್ತಾನೆ– ನಾನು **ರಬ್ಬನಾ** ಎಂದು ಹೇಳುವಾಗ ಒಬ್ಬ ಏಕನೂ ಸಹಭಾಗಿ ಇಲ್ಲದವನೂ ಆಗಿರುವ ಅಲ್ಲಾಹನನ್ನು, ನನ್ನ ಪ್ರಭುವನ್ನು ಕರೆದು ಪ್ರಾರ್ಥಿಸುತ್ತಿದ್ದೇನೆಂದು. ಹೀಗೆ ಆಗುವಾಗ ಅಂತಹ ವ್ಯಕ್ತಿ ವಾಸ್ತವಿಕ ಪ್ರಭುವನ್ನು ಮನವರಿಕೆ ಮಾಡಿಕೊಳ್ಳುತ್ತಾನೆ ಮತ್ತು ಅವನಿಂದ ಬೇಡಿಕೊಳ್ಳುತ್ತಾನೆ.

ಇಂತಹ ನೋವುಭರಿತ ಹೃತ್ಪೂರ್ವಕ ಸ್ಥಿತಿಯಲ್ಲಿ ತಮ್ಮ ಪಾಪಗಳನ್ನು ನಿವೇದಿಸಿ ತೌಬ ಮಾಡುವಾಗ ಮತ್ತು **ರಬ್ಬನಾ** ಎಂದು ಹೇಳುವಾಗ, 'ವಾಸ್ತವಿಕ ಪ್ರಭು ನೀನೇ ಆಗಿದ್ದೆ' ಎಂದು ಅಂಗೀಕರಿಸಿ ನಾವು ತಪ್ಪು ಮಾಡುತ್ತಾ ಅನ್ಯ ಸ್ಥಳಗಳಲ್ಲಿ ದಾರಿತಪ್ಪಿ ತಿರುಗುತ್ತಿದ್ದೆವು ಎಂದು ಒಪ್ಪಿಕೊಳ್ಳುತ್ತಾರೆ. ಆಗ ಮನುಷ್ಯನು ಹೇಳುತ್ತಾನೆ: ನಾನು ಮಿಥ್ಯ ಆರಾಧ್ಯರನ್ನು ತ್ಯಜಿಸಿರುವೆನು. ಸತ್ಯ ಹೃದಯದಿಂದ ನಿನ್ನ ಪ್ರಭುತ್ವವನ್ನು ಅಂಗೀಕರಿಸುತ್ತಿದ್ದೇನೆ. ನಿನ್ನ ಸನ್ನಿಧಿಗೆ ಆಗಮಿಸುತ್ತೇನೆ.

ನಾವು ನಿಷ್ಠಾವಂತರಾಗಿ ಅಲ್ಲಾಹನ ಸನ್ನಿಧಿಯಲ್ಲಿ ಬಾಗುವವರಾಗಲು, ಅವನನ್ನು ಆರಾಧಿಸುವವರಾಗಲು, ನಮ್ಮನ್ನು ಸೃಷ್ಟಿಸಿದ ಉದ್ದೇಶವನ್ನು ಮನವರಿಕೆ ಮಾಡುವವರಾಗಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ಬಗ್ಗೆ ಇಚ್ಛಿಸುತ್ತಾರೆ. ನಾವು ಈ ರೀತಿ ನಮ್ಮ ಪ್ರಭುವನ್ನು ಕರೆದು ಪ್ರಾರ್ಥಿಸುವುದಾದರೆ ಲೋಕದ ಒಳಿತುಗಳು ಸಹ ನಮಗೆ ದೊರಕುವುವು. ಪರಲೋಕದ ಒಳಿತುಗಳೂ ಸಹ ನಮಗೆ ದೊರಕುವುವು. ವಾಸ್ತವಿಕವಾಗಿ ಮನುಷ್ಯನು ಲೌಕಿಕ ಒಳಿತುಗಳನ್ನು ಬೇಡುವುದು ಪರಲೋಕದ ಒಳಿತುಗಳನ್ನು ಗಳಿಸಲಿಕ್ಕೋಸ್ಕರವೇ ಆಗಿರುತ್ತದೆ. ಆರೋಗ್ಯವನ್ನು ಬೇಡುವುದು ಆರಾಧನೆಯ ಹಕ್ಕನ್ನು ಈಡೇರಿಸಲಿಕ್ಕೋಸ್ಕರವಾಗಿರುತ್ತದೆ. ಆರೋಗ್ಯವಿದ್ದರೆ ಆರಾಧನೆ ಸಹ ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಸಂಪತ್ತು ಇದ್ದರೆ ಅಲ್ಲಾಹನ ಮಾರ್ಗದಲ್ಲಿ ಧನತ್ಯಾಗ ಮಾಡುವ ಕರ್ತವ್ಯ ಈಡೇರಿಸಲು ಸಾಧ್ಯವಾಗುತ್ತದೆ. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡಲು ಸಹ ಆ ಮೂಲಕ ಸಾಧ್ಯವಾಗುತ್ತದೆ.

ಈ ಮುಖ್ಯ ತತ್ವವನ್ನು ಯಾವಾಗಲೂ ನಮ್ಮ ಮುಂದೆ ಇರಿಸಬೇಕು. ಆರಾಧನೆಯ ಹಕ್ಕನ್ನು ಈಡೇರಿಸುವುದಕ್ಕೆ ಸಂಬಂಧಿಸಿ ನಾವು ನೆನಪಿಡಬೇಕಾದುದೇನೆಂದರೆ ನಾವು ಅಲ್ಲಾಹನ ಆಜ್ಞೆ ಪ್ರಕಾರ ನಮ್ಮ ಸೃಷ್ಟಿಯ ಉದ್ದೇಶವನ್ನು ಈಡೇರಿಸುವವರಾಗುವಾಗ ನಾವು ಅದರ ಬಗ್ಗೆ ಪ್ರಯತ್ನಿಸುವವರಾಗುವೆವು. ಅಲ್ಲಾಹನು ಹೇಳಿದ್ದಾನೆ: **ವಮಾ ಖಲಖ್ತುಲ್ ಜಿನ್ನ ವಲ್‌ಇನ್‌ಸ ಇಲ್ಲಾ ಲಿಯಅ್‌ಬುದೂನಿ.** ನನ್ನನ್ನು ಆರಾಧಿಸಲಿಕ್ಕೋಸ್ಕರ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ. (51:57). ನಾವು ಅಲ್ಲಾಹನ ಆಜ್ಞೆಗಳ ಕಡೆಗೆ ನೋಡುವಾಗ ಒಂದು ಆಜ್ಞೆಯ ನಂತರ ಇನ್ನೊಂದು ಆಜ್ಞೆ ನಮ್ಮನ್ನು ನೆನಪಿಸುವುದೇನೆಂದರೆ ಅಲ್ಲಾಹನನ್ನು ಎಂದೂ ಮರೆತು ಬಿಡಬಾರದೆಂದು. ನೀವು ಮಾಡುವ ಲೌಕಿಕ ಪ್ರಯತ್ನಗಳು ಸಹ ನಿಮ್ಮನ್ನು ಅಲ್ಲಾಹನ ಸ್ಮರಣೆಯಿಂದ ನಿರ್ಲಕ್ಷ್ಯತೆ ಹೊಂದುವವರನ್ನಾಗಿ

ಮಾಡಬಾರದು. ಲೌಕಿಕ ಅಭಿಲಾಷೆಗಳ ಈಡೇರುವಿಕೆ ನಿಮ್ಮ ಉದ್ದೇಶ ಲಕ್ಷ್ಯವಾಗಿರಬಾರದು. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ಅಲ್ಲಾಹನು ಹೇಳಿದ್ದಾನೆ– ನಾನು ಜಿನ್ಸ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಿರುವುದು ಅವರು ನನ್ನನ್ನು ಗುರುತಿಸಿ ನನ್ನನ್ನು ಆರಾಧಿಸಲಿಕ್ಕೋಸ್ಕರವಾಗಿದೆ. ಆದುದರಿಂದ ಪವಿತ್ರ ಖುರ್‌ಆನಿನ ಈ ವಚನದ ಪ್ರಕಾರ ಮನುಷ್ಯನ ಜೀವಿತದ ಮೂಲ ಉದ್ದೇಶ ಅಲ್ಲಾಹನ ಆರಾಧನೆ, ಅಲ್ಲಾಹನ ಬಗ್ಗೆ ಸೂಕ್ಷ್ಮಜ್ಞಾನ ಗಳಿಸುವುದು ಮತ್ತು ಅವನಿಗೆ ಸೇರಿದವನಾಗುವುದು ಆಗಿದೆ. ಮನುಷ್ಯನಿಗೆ ತನ್ನ ಜೀವಿತದ ಉದ್ದೇಶಲಕ್ಷ್ಯವನ್ನು ತಾನೇ ನಿರ್ಧರಿಸುವ ಅಧಿಕಾರವಿರುವುದಿಲ್ಲ. ಏಕೆಂದರೆ ಮನುಷ್ಯನು ತನ್ನ ಇಚ್ಛೆ ಪ್ರಕಾರ ಲೋಕಕ್ಕೆ ಆಗಮಿಸುವುದಿಲ್ಲ ಮತ್ತು ತನ್ನ ಇಚ್ಛೆ ಪ್ರಕಾರ ಲೋಕದಿಂದ ಮರಳಿ ಹೋಗುವುದೂ ಇಲ್ಲ. ಮನುಷ್ಯನು ಅಲ್ಲಾಹನ ಒಂದು ಸೃಷ್ಟಿಯಾಗಿದ್ದಾನೆ. ಸೃಷ್ಟಿಕರ್ತನು ಇತರ ಎಲ್ಲಾ ಪ್ರಾಣಿಗಳಿಗಿಂತ ಉತ್ತಮ ಮತ್ತು ಶ್ರೇಷ್ಠ ಶಕ್ತಿ ಸಾಮರ್ಥ್ಯಗಳನ್ನು ಮನುಷ್ಯನಿಗೆ ನೀಡಿದ್ದಾನೆ. ಅವನು ಮನುಷ್ಯನನ್ನು ಸೃಷ್ಟಿಗಳಲ್ಲಿ ಅತ್ಯಂತ ಶ್ರೇಷ್ಠನನ್ನಾಗಿ ಮಾಡಿದ್ದಾನೆ. ಅವನಿಗೆ ಅತ್ಯುತ್ತಮ ಶಕ್ತಿ ಸಾಮರ್ಥ್ಯಗಳನ್ನು ನೀಡಿದ್ದಾನೆ. ಅಲ್ಲಾಹನೇ ಮನುಷ್ಯನ ಜೀವಿತೋದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ. ಒಬ್ಬ ಮನುಷ್ಯ ಈ ಉದ್ದೇಶವನ್ನು ಮನವರಿಕೆ ಮಾಡಿದರೂ ಮಾಡದಿದ್ದರೂ ಮನುಷ್ಯನ ಸೃಷ್ಟಿಯ ಮೂಲ ಉದ್ದೇಶ ನಿಸ್ಸಂಶಯವಾಗಿ ಅಲ್ಲಾಹನ ಆರಾಧನೆ, ಅಲ್ಲಾಹನ ಬಗ್ಗೆ ಸೂಕ್ಷ್ಮಜ್ಞಾನ ಗಳಿಸುವುದು ಮತ್ತು ಅವನಲ್ಲಿ ತಲ್ಲೀನನಾಗುವುದೇ ಆಗಿದೆ.

ಒಬ್ಬ ಮನುಷ್ಯನು ಈ ಉದ್ದೇಶ ಲಕ್ಷ್ಯವನ್ನು ತನ್ನ ಮುಂದೆ ಇರಿಸುವಾಗ ಅವನು ನೈಜ ವಿಶ್ವಾಸಿಯಾಗುತ್ತಾನೆ. ಅವನು ಲೌಕಿಕ ಒಳಿತುಗಳನ್ನು ಅಲ್ಲಾಹನ ಸಂಪ್ರೀತಿ ಗಳಿಸುವ ಮಾರ್ಗವನ್ನಾಗಿ ಮಾಡುತ್ತಾನೆ. ಆದುದರಿಂದ ಮನುಷ್ಯನ ಬುದ್ಧಿ ಶಕ್ತಿ, ಮನುಷ್ಯನ ಶಾರೀರಿಕ ಶಕ್ತಿ ಸಾಮರ್ಥ್ಯಗಳು, ಮನುಷ್ಯನ ಸಾಂಪತ್ತಿಕ ಸ್ಥಿತಿ ಮತ್ತು ಆಧುನಿಕ ಕಾಲದ ಆವಿಷ್ಕಾರಗಳು ನಾವು ನಮ್ಮ ಸೃಷ್ಟಿಯ ಉದ್ದೇಶವನ್ನು ಮರೆತು ಬಿಡುವಂತೆ ಮಾಡುವವುಗಳಾಗದಿರಲಿ. ಅಹ್ಮದಿಯರಾದ ನಾವು ಹೀಗೆ ಘೋಷಿಸುತ್ತಿದ್ದೇವೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಪ್ರಕಾರ ದೀರ್ಘವಾದ ಅಂಧಕಾರಮಯವಾದ ಒಂದು ಕಾಲಘಟ್ಟದ ನಂತರ ಇಸ್ಲಾಮಿನ ಪ್ರಕಾಶಮಾನವಾದ ಸೂರ್ಯನು ಮಸೀಹ್ ಮೌಊದ್‌ರ ಕಾಲದಲ್ಲಿ ಉದಿಸಲಿಕ್ಕಿತ್ತು. ಅವರು ಮುಸ್ಲಿಮರ ಹೃದಯಗಳನ್ನು ಅಂಧಕಾರದಿಂದ ಪ್ರಕಾಶದ ಕಡೆಗೆ ಇಸ್ಲಾಮಿನ ವಾಸ್ತವಿಕ ಉಪದೇಶಗಳನ್ನು ಉಪದೇಶಿಸಿ ತರುವವರಾಗಿದ್ದಾರೆ. ಅವರು ಮುಸ್ಲಿಮೇತರರಿಗೂ ಇಸ್ಲಾಮಿನ ಸೌಂದರ್ಯ ಭರಿತ ನೈಜ ತತ್ವಗಳನ್ನು ತಿಳಿಸುವವರಾಗಿದ್ದಾರೆ.

ಆದುದರಿಂದ ಈ ದೇಶಗಳಲ್ಲಿ ಆಗಮಿಸಿದ ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯವೇನೆಂದರೆ ಅವನು ತನ್ನ ಈ ಕರ್ತವ್ಯವನ್ನು ಈಡೇರಿಸಲು ಪೂರ್ಣವಾಗಿ ಪ್ರಯತ್ನಿಸಬೇಕು. ಅಹ್ಮದಿಯರು ವಾಸಿಸುತ್ತಿರುವ ಪರಿಸರಗಳಲ್ಲಿ ನೈಜ ಇಸ್ಲಾಮ್ ಏನೆಂದು ಜನರಿಗೆ ತಿಳಿಸಬೇಕು. ಪ್ರತಿಯೊಬ್ಬ ಅಹ್ಮದಿಯ ಕೆಲಸ, ಅವನ ಸ್ವಭಾವಗುಣ, ಅವನ ಆರಾಧನೆಯ ಮಟ್ಟ ಹೇಗಿರಬೇಕೆಂದರೆ ಅನ್ಯರ ಶ್ರದ್ಧೆ ಅವನ ಕಡೆಗೆ ಆಕರ್ಷಿಸುವ ರೀತಿಯಲ್ಲಿರಬೇಕು. ಇದು ಅಹ್ಮದಿಯರನ್ನು ಅನ್ಯರಿಂದ ವೈಶಿಷ್ಟ್ಯವುಳ್ಳವರನ್ನಾಗಿ ಗುರುತಿಸಲ್ಪಡಲು ಸಹಾಯಕವಾಗುವುದಲ್ಲದೆ ಇಲ್ಲಿನ ಜನರಲ್ಲಿ ತಬ್ಲೀಗ್ ಮಾಡುವ ಮಾರ್ಗ ತೆರೆಯುವುದಕ್ಕೆ ಸಹ ಸಹಾಯಕವಾಗುವುದು. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಮನವರಿಕೆ ಮಾಡುವ ಆವಶ್ಯಕತೆ ಇದೆ. ಪ್ರತಿಯೊಬ್ಬ ಅಹ್ಮದಿಗೆ ಬಹಳ ದೊಡ್ಡದಾದೊಂದು ಉದ್ದೇಶಲಕ್ಷ್ಯವಿದೆ. ಮೊದಲು ತನ್ನ ಸೃಷ್ಟಿಯ ಉದ್ದೇಶವೇನೆಂದು ಅರಿತುಕೊಳ್ಳಬೇಕು. ಅನಂತರ ಇತರರು ಈ ಉದ್ದೇಶಲಕ್ಷ್ಯವನ್ನು ಮನವರಿಕೆ ಮಾಡುವಂತೆ ಅವರ ಗಮನ ಹರಿಸಬೇಕು. ಲೋಕಕ್ಕೆ ಈ ವಾಸ್ತವಿಕತೆಯ ಅರಿವು ಮೂಡುವಂತೆ ಮಾಡಬೇಕು. ಅಲ್ಲಾಹನು ಸೃಷ್ಟಿಸಿದ ಈ ಅನುಗ್ರಹಗಳು ನಮ್ಮನ್ನು ಅಲ್ಲಾಹನಿಂದ ದೂರ ಸರಿಸಲಿಕ್ಕೋಸ್ಕರವಲ್ಲ, ಅವು ನಮ್ಮನ್ನು ಅಲ್ಲಾಹನ ಸಾಮೀಪ್ಯ ಗಳಿಸುವಂತೆ ಮಾಡಲಿಕ್ಕೋಸ್ಕರವಾಗಿವೆ. ಆದುದರಿಂದ ನೀವು ಅವುಗಳನ್ನು ಬಳಸುವುದರಲ್ಲಿ ಜಾಗರೂಕತೆಯನ್ನು ಪಾಲಿಸಿರಿ. ಹಾಗೆ ಮಾಡದಿದ್ದರೆ ನೀವು ವಿನಾಶದ ಕಡೆಗೆ ಸಾಗುವಿರಿ.

ನಾಲ್ಕು ಐದು ವರ್ಷಗಳ ಹಿಂದೆ ಲೋಕವು ಈ ರೀತಿ ವಿನಾಶದ ಕಡೆಗೆ ಸಾಗುವ ಕಲ್ಪನೆ ಇರಲಿಲ್ಲ. ಅಥವಾ ಹಾಗೆ ಆಗುವುದನ್ನು ಅಂಗೀಕರಿಸುತ್ತಿರಲಿಲ್ಲ. ಆದರೆ ಇಂದಿನ ಸ್ಥಿತಿ ಸಂಪೂರ್ಣ ಭಿನ್ನವಾಗಿದೆ. ಲೋಕ ವಿನಾಶದ ಕಡೆಗೆ ಸಾಗುತ್ತಿರುವುದರ ಮೂಲ ಕಾರಣವೇನೆಂದರೆ ಅವರು ಭಾವಿಸುತ್ತಾರೆ ಪಶ್ಚಿಮದ ದೇಶಗಳ ಅಭಿವೃದ್ಧಿ ಅವರನ್ನು ವಿನಾಶದಿಂದ ರಕ್ಷಿಸುವುದು ಎಂದು. ಏನಾದರೂ ಹಾನಿಯುಂಟಾದರೆ ಸಹ ಅದನ್ನು ಭರ್ತಿ ಮಾಡಿಕೊಳ್ಳಬಹುದು ಎಂದು ಅವರು ಭಾವಿಸುತ್ತಾರೆ. ಆದರೆ ಹೀಗೆ ಯೋಚಿಸುವವರು ತಪ್ಪು ಮಾಡುತ್ತಿದ್ದಾರೆ. ಯುದ್ಧದ ನಾಶ ಸಂಭವಿಸುವಾಗ ಆರ್ಥಿಕವಾಗಿ ಸುಭದ್ರ ಸರಕಾರಗಳು ತಮ್ಮನ್ನು ಸ್ವಯಂ ರಕ್ಷಿಸಿಕೊಳ್ಳಲು ಪ್ರಥಮ ಪ್ರಯತ್ನ ಮಾಡುವುವು. ಆರ್ಥಿಕವಾಗಿ ಸಾಕಷ್ಟು ಭದ್ರವಾಗಿಲ್ಲದ ದೇಶಗಳು ಇನ್ನೂ ಹೆಚ್ಚು ಕೆಟ್ಟ ಸ್ಥಿತಿಗೆ ತಲಪುವುವು. ಅಹ್ಮದಿಯರು ಎಲ್ಲಿ ವಾಸಿಸುತ್ತಿರುವರೋ ಅಲ್ಲಿ ತಮ್ಮ ಕರ್ಮಗಳ ಮೂಲಕ ಮತ್ತು ಎಲ್ಲದಕ್ಕಿಂತಲೂ ಮಿಗಿಲಾಗಿ ದುಆಗಳ ಮೂಲಕ ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನಿಸಬೇಕು. ಅಲ್ಲಾಹನ ಅನುಗ್ರಹ ಮಾತ್ರ ಲೋಕವನ್ನು ವಿನಾಶದಿಂದ ರಕ್ಷಿಸಬಹುದು. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದು ಆವಶ್ಯಕವಾಗಿದೆ. ಅಲ್ಲಾಹನ ಮುಂದೆ ಬಾಗಿ ಪ್ರಾರ್ಥಿಸುವ ಮೂಲಕವೇ ಅವನ ಸಂಪ್ರೀತಿ ಗಳಿಸಬಹುದು. ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕಾದುದೇನೆಂದರೆ ಕೇವಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವುದರಿಂದ ಮಾತ್ರ ಅವನನ್ನು ಆ ನಂಬಿಕೆ ಇಹಪರಲೋಕಗಳ ಒಳಿತುಗಳ ಮಾಲಿಕನನ್ನಾಗಿ ಮಾಡಲಾರದು. ಮತ್ತು ನರಕಾಗ್ನಿಯಿಂದ ಅವನನ್ನು ರಕ್ಷಿಸಲಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವುದರಿಂದ ನಮ್ಮ ಮೇಲೆ ಹೆಚ್ಚು ಹೊಣೆಗಾರಿಕೆಗಳ ಭಾರ ಬೀಳುತ್ತದೆ. ನಾವು ನಮ್ಮ

ಜೀವಿತವನ್ನು ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಅಳವಡಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ನೆನಪಿಡಿರಿ, ಕೇವಲ ಬೈಅತ್ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಅಲ್ಲಾಹನು ಕೇವಲ ಆಚಾರದಿಂದ ಸಂಪ್ರೀತನಾಗುವುದಿಲ್ಲ. ವಾಸ್ತವಿಕ ಬೈಅತ್ ಏನೆಂದು ಅರ್ಥ ಮಾಡಿಕೊಳ್ಳುವ ತನಕ ಈ ಬೈಅತ್ ಒಂದು ಆಚಾರ ಮಾತ್ರವಾಗಿರುತ್ತದೆ. ಅದು ಬೈಅತ್ ಆಗಿರುವುದಿಲ್ಲ. ಆದುದರಿಂದ ಬೈಅತಿನ ವಾಸ್ತವಿಕ ಉದ್ದೇಶವನ್ನು ಈಡೇರಿಸಲು ಪ್ರಯತ್ನ ಮಾಡಿರಿ. ಆ ವಾಸ್ತವಿಕ ಉದ್ದೇಶ ಏನು? ತಖ್ವವನ್ನು ಅವಲಂಬಿಸಿರಿ. ಪವಿತ್ರ ಖುರ್‌ಆನನ್ನು ಲಕ್ಷ್ಯವಿಟ್ಟು ಓದಿರಿ. ಅದರ ಬಗ್ಗೆ ಚಿಂತಿಸಿರಿ. ಮತ್ತು ಕಾರ್ಯನಿರತರಾಗಿರಿ. ಅಲ್ಲಾಹನ ನಡೆವಳಿಕೆ ಹೇಗಿದೆ ಎಂದರೆ ಕೇವಲ ಮಾತುಗಳಿಂದ ಅಲ್ಲಾಹನು ಎಂದೂ ಸಂಪ್ರೀತನಾಗುವುದಿಲ್ಲ. ಅವನ ಸಂಪ್ರೀತಿ ಪಡೆಯಲು ಅವನ ಆಜ್ಞೆಗಳನ್ನು ಪಾಲಿಸುವುದು ಆವಶ್ಯಕವಾಗಿದೆ. ಅವನು ಮಾಡಬಾರದೆಂದು ಹೇಳಿದುದನ್ನು ಮಾಡಬೇಡಿರಿ. ಇದು ಎಷ್ಟು ಸ್ಪಷ್ಟವಾದ ವಿಷಯವೆಂದರೆ, ಮನುಷ್ಯರು ಸಹ ಕೇವಲ ಬಾಯಿಮಾತಿನಿಂದ ಸಂತೋಷಗೊಳ್ಳುವುದಿಲ್ಲ. ಮನುಷ್ಯರು ಸೇವೆಯ ಮೂಲಕವೇ ಸಂತೋಷಪಡುತ್ತಾರೆ. ನೈಜ ಮುಸ್ಲಿಮ್ ಮತ್ತು ಮಿಥ್ಯ ಮುಸ್ಲಿಮನ ಮಧ್ಯೆ ಇರುವ ವ್ಯತ್ಯಾಸ ಇದೇ ಆಗಿದೆ. ಮಿಥ್ಯ ಮುಸ್ಲಿಮನು ಕೇವಲ ಬಾಯಿ ಮಾತು ಆಡುತ್ತಾನೆ. ಕರ್ಮವನ್ನೇನೂ ಮಾಡುವುದಿಲ್ಲ. ನೈಜ ಮುಸ್ಲಿಮನು ಕರ್ಮ ಮಾಡುತ್ತಾನೆ. ಮಾತನಾಡುವುದಿಲ್ಲ. ಅಲ್ಲಾಹನು, 'ನನ್ನ ದಾಸ ನನ್ನನ್ನು ಆರಾಧಿಸುತ್ತಾನೆ, ನನ್ನ ಸೃಷ್ಟಿಗಳ ಮೇಲೆ ದಯೆದೋರುತ್ತಾನೆ' ಎಂದು ನೋಡುವಾಗ ತನ್ನ ದಿವ್ಯದೂತರನ್ನು ಅವನಿಗೆ ಇಳಿಸುತ್ತಾನೆ. ನೈಜ ಮತ್ತು ಮಿಥ್ಯ ಮುಸ್ಲಿಮನ ಮಧ್ಯೆ ಇರುವ ವ್ಯತ್ಯಾಸವನ್ನು ತನ್ನ ವಾಗ್ದಾನ ಪ್ರಕಾರ ತೋರಿಸುತ್ತಾನೆ.

ನಮ್ಮಲ್ಲಿ ಪ್ರತಿಯೊಬ್ಬನು ನೈಜ ಮುಸ್ಲಿಮನಾಗಲು ಪ್ರಯತ್ನಿಸಬೇಕು. ಲೋಕದ ಒಳಿತುಗಳಿಂದ ಲಾಭ ಪಡೆಯುವುದು ಪರಲೋಕದ ಒಳಿತುಗಳಿಗೆ ವಾರೀಸುದಾರರಾಗಲಿಕ್ಕೋಸ್ಕರವಾಗಿರಬೇಕು. ನಾವು ನಮ್ಮ ಆರಾಧನೆಯ ಹಕ್ಕುಗಳನ್ನು ಈಡೇರಿಸುವವರಾಗೋಣ. ಧರ್ಮದ ಕಾರಣದಿಂದ ನಾವು ನಮ್ಮ ದೇಶಗಳಿಂದ ಹೊರಗೆ ಹೋಗಲು ನಿರ್ಬಂಧಿತರಾಗಿದ್ದೇವೆ. ನಾವು ಇಲ್ಲಿಗೆ ಆಗಮಿಸಿ ನಮ್ಮ ಧಾರ್ಮಿಕ ಉಪದೇಶಗಳನ್ನು ಅನುಷ್ಠಾನಕ್ಕೆ ತರುವವರಾಗೋಣ. ಅಲ್ಲಾಹನು ಎಲ್ಲರಿಗೂ ಹಾಗೆ ಮಾಡಲು ಭಾಗ್ಯ ದಯಪಾಲಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithur Rahman,Velencia, Spain. On 06-04-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon